# ಕೆಂಬಾವುಟ

ವಿಶೇಷಾಂಕ–2020

ಸಂಪುಟ : 47

ಸಂಚಿಕೆ : 1–4

ಬೆಲೆ : ರೂ. 30/–

ಒಟ್ಟು ಪುಟಗಳು: 104

ದಿನಾಂಕ: 06–09–2020

ಸಂಪಾದಕರು

ಶಿವರಾಜ ರಾ. ಬಿರಾದಾರ

ಸಂಪಾದಕ ಮಂಡಳಿ

ಪಿ. ವಿ. ಲೋಕೇಶ್
ಮ. ಶ್ರೀ ಮುರಳಿ ಕೃಷ್ಣ
ಎಚ್. ವಿ. ರಾವ್
ಜ್ಯೋತಿ ಎ.
ಪಿ. ಷಣ್ಮುಖಸ್ವಾಮಿ
ಎಂ. ಸಿ. ಡೋಂಗ್ರೆ
ಐ. ಅಮ್ಜದ್
ಅಶ್ವತ್ಥ್ ನಾರಾಯಣ್

## ಪರಿವಿಡಿ

| | | |
|---|---|---|
| ದೇಶದ ಸಂವಿಧಾನ ಕಾಪಾಡುವ ಮತ್ತು... | ಶಿವರಾಜ ರಾ. ಬಿರಾದಾರ | 6 |
| ಭಾರತದ ಬಹುಸಂಖ್ಯಾತ ಅಗೋಚರ ಕಾರ್ಮಿಕರು | ಮುರಳಿಧರ | 9 |
| ಭಾರತದಲ್ಲಿ ವರ್ಣ ಸಂಸ್ಕೃತಿ | ಡಾ॥ ಜಿ. ರಾಮಕೃಷ್ಣ | 17 |
| ರಾಜಕೀಯ ಸುಳ್ಳುಗಳು ಮತ್ತು ಕೊರೊನಾ | ಡಾ॥ ಪ್ರಕಾಶ ದೇಸಾಯಿ | 25 |
| ಕೊರೋನಾ ಕಾಲ: ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಗಳ ಹಸ್ತಕ್ಷೇಪ | ಮ. ಶ್ರೀ. ಮುರಳಿ ಕೃಷ್ಣ | 33 |
| ಎನ್‌ಕೌಂಟರ್‌ನಲ್ಲಿ ಮರ್ಡರ್ ಆಗಿರುವುದು ಸತ್ಯ... | ನ. ಸುಂದರಮೂರ್ತಿ | 37 |
| 'ಹೆಬ್ಬೆಟ್ ರಾಮಕ್ಕ' ಮಹಿಳಾ ಸಬಲೀಕರಣದ... | ಪ್ರೊ ಎಂ.ಅಬ್ದುಲ್ ರೆಹಮಾನ್ ಪಾಷ | 49 |
| ನಗು ಮುಖದ ಹೋರಾಟಗಾರ... | ವಿ. ಕುಕ್ಯಾನ್ | 59 |
| ಕರೋನಾ ಕಾಲದ ಮಹಿಳಾ ಸಂಕಷ್ಟಗಳು | ಡಾ॥ ಕೆ. ಪರೀಫಾ | 69 |
| ರೈತ ಕಾರ್ಮಿಕರ ಪ್ರತಿರೋಧ ಮತ್ತು ಪರ್ಯಾಯ | ಡಾ॥ ಸಿದ್ದನಗೌಡ ಪಾಟೀಲ | 79 |
| ವೈರಸ್... (ಒಂದು ಸಣ್ಣ ಕಥೆ) | ಜ್ಯೋತಿ ಎ. | 87 |
| ತ್ರಿಭಾಷಾ ಸೂತ್ರ ಬೇಡ, ದ್ವಿಭಾಷಾ ಸೂತ್ರ ಸಾಕು | ಡಾ. ಕಾ. ವೆಂ. ಶ್ರೀನಿವಾಸಮೂರ್ತಿ | 94 |
| ಬಹುತ್ವ ಭಾರತದ ಸಾಂಸ್ಕೃತಿಕ ಬಿಕ್ಕಟ್ಟುಗಳು | ಎ. ಬಿ. ರಾಮಚಂದ್ರಪ್ಪ | 96 |
| ಸಹಕಾರದತ್ತ ಸಾಗಬೇಕಿದ್ದ ಕೃಷಿಭೂಮಿ ಸಾಹುಕಾರರತ್ತ | ಎಸ್. ಪಿ. ಮೂಲೆಮನೆ | 99 |
| **ಕವನಗಳು:** ಅಪೌಷ್ಟಿಕತೆ | | 29 |
| ಶ್ರಮಿಕನ ನೋವು | | 35 |
| ಆಸರೆಯ ಬಯಸಿ... | | 47 |
| ಭರವಸೆ | | 57 |
| ಕರೋನ ದಿನಗಳಲ್ಲಿ ... | | 77 |
| ಹಸಿರು ಉಸಿರು | | 85 |
| ಕತ್ತಲೆಯ ಜನ | | 93 |
| ಕತ್ತಲ ಜಗತ್ತು | | 102 |

# ರಾಜಕೀಯ ಸುಳ್ಳುಗಳು ಮತ್ತು ಕೊರೊನಾ



ಡಾ॥ ಪ್ರಕಾಶ ದೇಸಾಯಿ

ದೇಶದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯ ಕುರಿತು ಸುಳ್ಳು ಹೇಳಿ ಸತ್ಯವನ್ನು ಮುಚ್ಚಿಹಾಕಿ ಸುಳ್ಳನ್ನೆ ಸತ್ಯವೆಂದು ಜನ ನಂಬುವಂತೆ ಮಾಡುವದು ಕಳೆದ ಹಲವು ದಶಕಗಳಿಂದ ಅಭಿವೃದ್ಧಿಶೀಲ ರಾಷ್ಟ್ರಗಳ ಅನೇಕ ರಾಜಕೀಯ ಪಕ್ಷ ಮತ್ತು ಧುರೀಣರಲ್ಲಿ ಕಂಡು ಬರುವ ವಾಡಿಕೆಯಾಗಿದೆ. ಇತ್ತಿತ್ತಲಾಗಿ, ಈ ವಾಡಿಕೆಯನ್ನು ನಮ್ಮ ದೇಶದ ಕೆಲವು ಪಕ್ಷಗಳು ಮತ್ತು ಅವುಗಳ ಧುರೀಣರು ಬಹಳ ಚೆನ್ನಾಗಿ ಕರಗತ ಮಾಡಿಕೊಂಡಿದ್ದಾರೆ. ಸುಳ್ಳುಗಳಿಗೆ ಜೈಕಾರ ಹಾಕುವ ದೊಡ್ಡದಾದ ಜನಬೆಂಬಲವಿದ್ದರೆ ಸುಳ್ಳು ಹೇಳುವ ಧುರೀಣರಿಗೆ ಇನ್ನಷ್ಟು ಸುಳ್ಳು ಹೇಳಲು ಬಲಬರುತ್ತದೆ. ನೈಸರ್ಗಿಕ ವಿಕೋಪಗಳಾದ ಚಂಡಮಾರುತ, ಪ್ರವಾಹ, ಭೂಕಂಪ, ಬರ, ಸಾಂಕ್ರಾಮಿಕ ರೋಗ ಇತ್ಯಾದಿಗಳು ಬಂದರೆ ಅವುಗಳಿಂದ ದೇಶದ ಜನರನ್ನು ರಕ್ಷಿಸುವದು ಸರ್ಕಾರದ ಹೊಣೆಯಾಗಿರುತ್ತದೆ. ಈ ಹೊಣೆಗಾರಿಕೆಯನ್ನು ನಿಭಾಯಿಸದೆ ವಿಕೋಪಗಳನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಆಡಳಿತ ಪಕ್ಷಗಳು ಮತ್ತು ವಿರೋಧ ಪಕ್ಷಗಳು ಬಳಸುವ ಕೆಟ್ಟ ಚಾಳಿಯನ್ನು ನೋಡಿದ್ದೆವೆ ಮತ್ತು ಕಳೆದ ಐದು ತಿಂಗಳಿಗಿಂತ ಹೆಚ್ಚಿನ ದಿನಗಳಿಂದ ಕೊರೋನಾ ಎಂಬ ವಿಶ್ವವ್ಯಾಪಿ ಸಾಂಕ್ರಾಮಿಕ ರೋಗದಿಂದ ದೇಶದ ಜನತೆಯು ತತ್ತರಿಸಿದರೂ ಅವರ ಸಾವು-ನೋವುಗಳಿಗೆ ತಕ್ಕ ಮಟ್ಟಿನ ಸ್ಪಂದನೆ ಮಾಡಲಾರದ ಕೇಂದ್ರ ಮತ್ತು ಹಲವು ರಾಜ್ಯ ಸರ್ಕಾರಗಳನ್ನು ನಾವು ನೋಡುತಿದ್ದೆವೆ. ಜನ-ಜೀವನದ ಮೇಲೆ ಕೊರೊನಾ ರೋಗಕ್ಕೆ ಸಂಭಂದಿತ ಆಗುವ ಪರಿಣಾಮಗಳಿಗೆ ಸರ್ಕಾರಗಳು ಗಂಭೀರವಾಗಿ ಸ್ಪಂದಿಸದೆ ಅಧಿಕಾರ ಮೋಹದ ರಾಜಕೀಯವನ್ನು ಮಾಡುತ್ತಿವೆ. ಇಂತಹ ಸಂದಿಗ್ಧ ಸಮಯದಲ್ಲಿಯೂ ಆಡಳಿತ ಪಕ್ಷಗಳು ಜನಪರ ರಾಜಕೀಯ ಮಾಡುತ್ತಿಲ್ಲ. ಇಂತಹ ರಾಜಕೀಯವನ್ನು ನೋಡಿಯೇ, ಪಿ.ಸಾಯಿನಾಥ ಅವರು ಕೆಲವು ವರ್ಷಗಳ ಹಿಂದೆ "ಒಳ್ಳೆಯ ಬರವನ್ನು ಪ್ರತಿಯೊಬ್ಬನು ಪ್ರೀತಿಸುತ್ತಾನೆ", ಎಂಬ ತಮ್ಮ ವಿಮರ್ಷಾತ್ಮಕ ಪುಸ್ತಕದಲ್ಲಿ ಹಲವು ಕಟುಸತ್ಯಗಳನ್ನು ವಿವರಿಸಿದ್ದರು.

ದೇಶದ ಜನತೆ ಕೊರೊನಾದಿಂದ ಭಯಭೀತರಾಗಿ ಸರ್ಕಾರದ ಸಹಾಯ ಕೇಳುತ್ತಿರುವಾಗ, ಆಡಳಿತ ಪಕ್ಷಗಳು ತಮ್ಮದೆಯಾದ ಯಥಾ ರಾಜಕೀಯವನ್ನು ನಡೆಸಿವೆ. ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿ ಮತ್ತು ಬೆಳವಣಿಗೆಗಳ ಬಗ್ಗೆ ಸುಳ್ಳು ಹೇಳಲು ಆಡಳಿತ ಪಕ್ಷದ ರೂವಾರಿಗಳಿಗೆ ಕೊರೊನಾ ರೋಗವು ಸಹಾಯಕವಾಗಿ ಬಂದಿದೆ. ಈ ಸುಳ್ಳುಗಳಿಂದ ಅವರು ತಮ್ಮ ಭಕ್ತಲೋಕವನ್ನು ಇನ್ನು ಹೆಚ್ಚಿನ ಕುರುಡರನ್ನಾಗಿ ಮಾಡುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಕೊರೊನಾ ರೋಗವು ಆಡಳಿತ ಪಕ್ಷದವರಿಗೆ ಸಹಾಯಕವಾಗಿ ಬಂದಿರುವುದಲ್ಲದೆ ಅವರನ್ನು ಸುಳ್ಳುಗಾರರು ಎಂದು ಇನ್ನು ಹೆಚ್ಚಿನ ಮಟ್ಟಿಗೆ ತಿಳಿಯಲು ಪ್ರಜ್ಞಾವಂತ ನಾಗರಿಕರಿಗೆ ಮಾರ್ಗಸೂಚಿಯಾಗಿಯೂ ಕೂಡಾ ಬಂದಿದೆ. ಈ ಕೊರೊನಾ ಸಂಬಂಧಿತ ರಾಜಕೀಯ ನಿರೂಪಣೆಯಲ್ಲಿರುವ ಸುಳ್ಳುಗಳನ್ನು ತಿಳಿಯುವ ಪ್ರಯತ್ನ ಈ ಕಿರು ಪ್ರಭಂದದಲ್ಲಿ ಮಾಡಲಾಗಿದೆ.

## ಕೊರೊನಾ ಮತ್ತು ಧಾರ್ಮಿಕ ಉಹಾಪೋಹಿತ ಆರೋಪಗಳು

ದೇಶದ ಹಲವಾರು ಸಮಸ್ಯೆಗಳಿಗೆ ಅಲ್ಪಸಂಖ್ಯಾತರು ವಿಶೇಷವಾಗಿ ಮುಸ್ಲಿಮ ಸಮುದಾಯದವರು ಕಾರಣವೆಂದು ಆರೋಪ ಮಾಡುವದು ಕಳೆದ ಆರು ವರ್ಷಗಳಿಂದ ಸತತವಾಗಿ ವ್ಯಕ್ತವಾಗುವ ಪ್ರವೃತ್ತಿ ಆಗಿದೆ. ಈ ರೀತಿ ಪ್ರವೃತ್ತಿಯನ್ನು ವ್ಯಕ್ತಪಡಿಸುವರಲ್ಲಿ ಭಾರತೀಯ ಜನತಾ ಪಕ್ಷದ ಬಹತೇಕ ಬೆಂಬಲಿಗರಲ್ಲದೆ ಈ ಪಕ್ಷದ ನಾಯಕರು ಮತ್ತು ಇದರ ಸಿದ್ಧಾಂತವನ್ನು ಪ್ರಚಾರಿಸುವ ಬುದ್ಧಿವಂತರೆಂದು ಕರೆದುಕೊಳ್ಳುವ ಜನರೂ ಉಂಟು. ಇಂತಹ ಆರೋಪಗಳು ಇನ್ನು ಹೆಚ್ಚಿನ ಆಕರ್ಷಣೆ ಪಡೆದುಕೊಳ್ಳುವದರಲ್ಲಿ ನಮ್ಮಲ್ಲಿರುವ ಹಲವಾರು ಕಳಪೆ ಸುದ್ದಿ ವಾಹಿನಿಗಳು ಮತ್ತು ಅವುಗಳ ಕಳಪೆ ಸುದ್ದಿಗಾರರು ಆಡಳಿತ ಪಕ್ಷಗಳ ಗುಲಾಮರಂತೆ ವರ್ತಿಸಿ ತಮ್ಮ ಗುಲಾಮಗಿರಿಯ ಕೆಲಸವನ್ನು ನೆರವೇರಿಸುತ್ತಿದ್ದಾರೆ.

ಕಳೆದ ಮಾರ್ಚ ತಿಂಗಳಿನ ಆರಂಭದಲ್ಲಿ ದೆಹಲಿಯಲ್ಲಿ ಪ್ರಾರಂಭವಾದ ತಬ್ಲೀಗ್ ಜಮಾತದ ವಾರ್ಷಿಕ ಸಮಾವೇಶದಲ್ಲಿ ವಿದೇಶದ ಮತ್ತು ದೇಶದ ಅನೇಕ ಪ್ರಾಂತ್ಯಗಳ ಜಮಾತನ ಪ್ರಚಾರಕರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ವಿದೇಶದಿಂದ ಬಂದ ಕೆಲವು ಪ್ರಚಾರಕರನ್ನು ಕೊರೊನಾ ಸೋಂಕಿತರೆಂದು ತಿಳಿಯಲಾಯಿತು ಮತ್ತು ಇವರಿಂದ ಇದರಲ್ಲಿ ಭಾಗವಹಿಸಿದ ಅನೇಕರಿಗೆ ತಗುಲಿದ್ದು ಎಂದು ಶಂಕಿಸಲಾಯಿತು. ಹೀಗೆ ಶಂಕಿಸಲಾದವರನ್ನು ವಿವಿಧ ರಾಜ್ಯಗಳಲ್ಲಿ ಪರೀಕ್ಷೆಗೆ ಒಳಮಾಡಿದಾಗ ಅವರಲ್ಲಿ ಹಲವಾರು ಜನರು ಸೋಂಕಿತರೆಂದು ತಿಳಿದು ಬಂದಿತು. ಈ

ಬೆಳವಣಿಗೆಯನ್ನು ಭಾರತೀಯ ಜನತಾ ಪಕ್ಷದ ರಾಜ್ಯ ಮತ್ತು ರಾಷ್ಟ್ರೀಯ ಕೆಲವು ನಾಯಕರು ರಾಜಕೀಯ ಲಾಭಕ್ಕಾಗಿ ಜಮಾತ ಪ್ರಚಾರಕರ ಮೇಲೆ ಆರೋಪಿಸಲು ಪ್ರಾರಂಭಿಸಿದರು. ಕನ್ನಡದ ಕೆಲವೊಂದು ಸುದ್ದಿ ಮಾಧ್ಯಮಗಳು ಒಂದು ಹೆಜ್ಜೆ ಮುಂದು ಹೋಗಿ ಸುದ್ದಿಗಳ ಶೀರ್ಷಿಕೆಗಳಲ್ಲಿ ಕೊರೊನಾ ವೈರಸ್‌ನ್ನು ತಬ್ಲೀಗಿ ವೈರಸ್ ಎಂದು ತೋರಿಸಿ ಸುದ್ದಿಯನ್ನು ಭಿತ್ತರಿಸುತ್ತಾ ವಿಷಯದ ಕೋಮುವಾದಿಕರಣದ ಪ್ರಕ್ರೀಯೆಗೆ ಪರೋಕ್ಷ ಮತ್ತು ಅಪರೋಕ್ಷವಾಗಿ ಮುಂದಾದರು. ಇಲ್ಲಿ ತಿಳಿಸಲೇಬೇಕಾದ ವಿಷಯವೇನಂದರೆ, ವಿದೇಶದಲ್ಲಿ ಸಿಕ್ಕಿಕೊಂಡಿರುವ ಭಾರತಿಯರು ಸರ್ಕಾರವು ಆಯೋಜಿಸಿದ ವಿಶೇಷ ವಿಮಾನಗಳಲ್ಲಿ ದೇಶಕ್ಕೆ ಮರಳಿ ಬಂದದ್ದು. ಹೀಗೆ ಮರಳಿದ ಅನೇಕ ಭಾರತೀಯರು ಕೊರೊನಾ ಪರೀಕ್ಷೆಗೊಳಗಾದಾಗ ಸೋಂಕಿತರೆಂದು ಫಲಿತಾಂಶ ಬಂದಿತು. ಇವರಲ್ಲಿರುವ ವೈರಸ್‌ನ್ನು ಅವರ ಧರ್ಮ ಆಧಾರವಾಗಿಟ್ಟುಕೊಂಡು ಹಿಂದು ವೈರಸ್, ಇಸಾಯಿ ವೈರಸ್, ಸಿಖ್ ವೈರಸ್ ಎಂದು ಹೇಳುವುದು ತರ್ಕವಿಲ್ಲದ ಮಾತುಗಳಾಗುತ್ತವೆ. ನಮ್ಮ ಸುದ್ದಿ ಮಾಧ್ಯಮಗಳು ಯಾವುದೆ ತರ್ಕ, ವೈಜ್ಞಾನಿಕತೆಯನ್ನು ಅನ್ವಯ ಮಾಡದೆ ತಬ್ಲೀಗ್ ಜಮಾತ ಬೋಧಕರಿಗೆ ತಗುಲಿದ್ದ ವೈರಸ್‌ನ್ನು ತಬ್ಲೀಗಿ ವೈರಸ್ ಎಂದು ಕರೆದು ತಮ್ಮ ಅಜ್ಞಾನವನ್ನು ಪ್ರದರ್ಶಿಸಿದರು.

## ವಲಸೆ ಕಾರ್ಮಿಕರು

ಕೊರೊನಾ ವೈರಸ್ ಹರಡುವುದನ್ನು ತಡೆಯುವ ಉದ್ದೇಶದಿಂದ ಕಳೆದ ಮಾರ್ಚ ತಿಂಗಳಿನ ಕೊನೆಯಲ್ಲಿ ಕೇಂದ್ರ ಸರ್ಕಾರವು ದೇಶಾದ್ಯಂತ ಲಾಕ್‌ಡೌನ್ ಜಾರಿಗೆ ತಂದಿತು. ಮೊದಲಿಗೆ ಮೂರು ವಾರುಗಳಿಗೆ ಸೀಮಿತವಾಗಿದ್ದ ಲಾಕ್‌ಡೌನ್ ಮುಂದೆ ಹಲವು ದಿನಗಳವರೆಗೆ ವಿಸ್ತರಿಸಲಾಯಿತು. ನಮ್ಮೆಲ್ಲರಿಗೂ ತಿಳಿದ ಹಾಗೆ, ಈ ಲಾಕ್‌ಡೌನ ಯಾವುದೆ ಪೂರ್ವ ಸಿದ್ಧತೆ ಇಲ್ಲದೆ ಜಾರಿಗೆ ತರಲಾಯಿತು. ಈ ರೀತಿ ಯಾವುದೆ ಮುಂದಾಲೋಚನೆ ಇಲ್ಲದೆ ಜಾರಿಗೆ ತಂದಿರುವ ಲಾಕ್‌ಡೌನ್ ನಿರ್ಗತಿಕ ವಲಸೆ ಕಾರ್ಮಿಕರ ದಿನನಿತ್ಯದ ಜೀವನದ ಮೇಲೆ ಬಹಳಷ್ಟು ಪರಿಣಾಮವನ್ನುಂಟು ಮಾಡಿತು. ಕೆಲಸವಿಲ್ಲದೆ ಕೈಯಲ್ಲಿ ಹಣವಿಲ್ಲದಂತಾಗಿ ಹಲವು ದಿನಗಳವರೆಗೆ ಉಪಜೀವನಕ್ಕಾಗಿ ಮಾನವೀಯ ಹೃದಯದ ಜನರು ಮತ್ತು ಸಂಘ–ಸಂಸ್ಥೆಗಳ ಮೇಲೆ ಅವಲಂಬಿತವಾಗಬೇಕಾಯಿತು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿರುವ ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ದಿನಸಿಯನ್ನು ಸ್ಥಳೀಯ ಆಡಳಿತದ ಸಮನ್ವಯದೊಂದಿಗೆ ನಿರ್ಗತಿಕ ಜನರನ್ನು ಗುರುತಿಸಿ ಪೂರೈಕೆ ಮಾಡಬಹುದಾಗಿತ್ತು. ಸಮುದಾಯ ಊಟದ ವ್ಯವಸ್ಥೆ ನಗರ ಪ್ರದೇಶಗಳಲ್ಲಿ ಪ್ರಾರಂಭಿಸಿ ದೈಹಿಕ ಅಥವಾ ಸಾಮಾಜಿಕ ಅಂತರವನ್ನು ಕಾಪಾಡಿ ನಿರ್ಗತಿಕ ಕುಟುಂಬಗಳಿಗೆ ಅಹಾರವನ್ನು ಪೂರೈಸಬಹುದಾಗಿತ್ತು. ಇಂತಹ ಕಾರ್ಯವನ್ನು ಕೆಲವು ರಾಜ್ಯಗಳನ್ನು ಹೊರತು ಪಡಿಸಿ ಬೇರೆ ಯಾವಕಡೆ ಆಗಲಿಲ್ಲ. ಕೇರಳದ ಎಡಪಂಥಿಯ ರಾಜ್ಯ ಸರ್ಕಾರವು ಈ ನಿಟ್ಟಿನಲ್ಲಿ ಮಾಡಿದ ಕೆಲಸ ಶ್ಲಾಘನೀಯ.

ನಗರ ಪ್ರದೇಶಗಳನ್ನು ಬಿಟ್ಟು ತಮ್ಮ ರಾಜ್ಯ ಮತ್ತು ಹಳ್ಳಿಗಳಿಗೆ ಹೋಗಬೇಕಂದರೆ ಬಡ ವಲಸೆ ಕಾರ್ಮಿಕರಿಗೆ ಯಾವುದೆ ಸಾರಿಗೆ ವ್ಯವಸ್ಥೆ ಇರಲಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಯೋಚಿತವಾಗಿ ಸಾರಿಗೆ ವ್ಯವಸ್ಥೆ ಮಾಡಲಾರದ ಕಾರಣ ಸಾವಿರಾರು ಬಡವಲಸೆ ಕಾರ್ಮಿಕರು ತಮ್ಮ ರಾಜ್ಯ ಮತ್ತು ಹಳ್ಳಿಗಳಿಗೆ ಸೈಕಲ್ಲಿನ ಮೇಲೆ, ಕಾಲು ನಡುಗೆಯಿಂದ ಹೋಗುವ ಪರಿಸ್ತಿತಿ ಬಂದಿತು. ಮಾರ್ಗ ಮಧ್ಯ ಅವರು ಪಟ್ಟ ಸಮಸ್ಯೆಗಳು ಹಲವಾರು. ಕೆಲವರು ಬಾಯಾರಿಕೆ ಮತ್ತು ಹಸಿವಿನಿಂದ ಬಳಲಿದರೆ, ಕೆಲವರು ದಾರಿಯಲ್ಲಿಯೇ ಅಸುನೀಗಿದರು. ಇಷ್ಟೆಲ್ಲಾ ಸಮಸ್ಯೆಗಳಾದರೂ ನಮ್ಮ ಪ್ರಧಾನ ಮಂತ್ರಿ ಲಾಕ್‌ಡೌನ್ ಮತ್ತು ಉಚಿತ ಧಾನ್ಯಗಳ ವಿತರಣೆ ಕುರಿತು ಸರ್ಕಾರವು ತೆಗೆದುಕೊಂಡ ನಿರ್ಧಾರಗಳು ಬಡವರು ಹಸಿವೆಯಿಂದ ಬಳಲದಂತೆ ನೋಡಿಕೊಂಡವು ಎಂದು ಜೂನ್ ತಿಂಗಳಿನ ಕೊನೆಯಲ್ಲಿ ಹೇಳಿದಾಗ ಆತ್ಮಸಾಕ್ಷಿ ಇರುವ ಪ್ರಜ್ಞಾವಂತ ನಾಗರಿಕರು ನಾಚಿಕೆ ಪಡುವಂತಾಯಿತು. ವಲಸೆ ಕಾರ್ಮಿಕರ ಸಮಸ್ಯೆಗಳ ಕುರಿತು ಕೆಲವೆ ಕೆಲವುಗಳನ್ನು ಹೊರತು ಪಡೆಸಿ ವಿವಿಧ ರಾಜ್ಯಗಳ ಆಡಳಿತ ಪಕ್ಷಗಳಲ್ಲಿ ಮತ್ತು ಕೇಂದ್ರದ ಆಡಳಿತ ಪಕ್ಷದಲ್ಲಿ ಮಾನವೀಯ ಮುಖವನ್ನು ಕಾಣಲಿಲ್ಲ. ಸರ್ಕಾರದ ಆಡಳಿತ ಹುದ್ದೆಯಲ್ಲಿರುವ ಜನನಾಯಕರು ಖಳನಾಯಕರಂತೆ ವರ್ತನೆ ಮಾಡಿದರು ಮತ್ತು ಮಾಡುತಿದ್ದಾರೆ.

## ಅಭಿವೃದ್ಧಿ ನೈಜತೆಯನ್ನು ತೆರೆದಿಟ್ಟ ಕೊರೊನಾ

ಯಾವುದೆ ನೈಸರ್ಗಿಕ ವಿಕೋಪಕ್ಕೆ ದೇಶಗಳು ತುತ್ತಾದ ಸಮಯದಲ್ಲಿ ಆ ದೇಶಗಳ ಅಭಿವೃದ್ಧಿ ಚಿತ್ರಣವು ಬಯಲಿಗೆ ಬರುತ್ತದೆ. ದೇಶದ ಪ್ರತಿ ಕ್ಷೇತ್ರಗಳಲ್ಲೂ ಅಂದರೆ, 1)ಆರೋಗ್ಯ ಸೌಲಭ್ಯಗಳಾದ ಆಸ್ಪತ್ರೆಗಳು, ಔಷಧಿ, ಮತ್ತು ವೈದ್ಯರು 2) ವಸತಿ 3) ಸಾಮಾಜಿಕ ಪ್ರಜ್ಞೆಯ ಶಿಕ್ಷಣ 3) ಸಾರಿಗೆ ಮತ್ತು ಸಂವಹನ 4) ಆಹಾರ ಪೂರೈಕೆಗಳಲ್ಲಿ ಉತ್ಕೃಷ್ಟ ಮಟ್ಟದ ಅಭಿವೃದ್ಧಿಯ ಸೂಚಕಗಳಿದ್ದರೆ ಆ ದೇಶವು ಯಾವುದೆ ವಿಕೋಪಗಳು ಬಂದರೆ ಅವುಗಳನ್ನು ಎದುರಿಸಿ ಜನರನ್ನು ಸಮಸ್ಯೆಗಳಿಂದ ಮುಕ್ತರನ್ನಾಗಿ ಮಾಡುವ ಸಾಧ್ಯತೆ ಇರುತ್ತದೆ. ಇವುಗಳ ಕೊರತೆ ಇದ್ದರೆ ದೇಶದ ಸರ್ಕಾರ ಮತ್ತು ಆಡಳಿತದಿಂದ ಈ ಕೆಲಸ ಮಾಡಲಿಕ್ಕಾಗುವುದಿಲ್ಲ. ಜಪಾನ ದೇಶವನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಆ ದೇಶದಲ್ಲಿ ಆಗಾಗ್ಗೆ ಆಗುವ ಭೂಕಂಪಗಳು ಜನಜೀವನದ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಆದರೆ, ಆ ದೇಶದ ಅಭಿವೃದ್ಧಿ ಮತ್ತು ಆರ್ಥಿಕ ಮಟ್ಟ ಸುಭದ್ರವಾಗಿರುವುದರಿಂದ ಕೆಲವೆ ದಿನಗಳಲ್ಲಿ ದೇಶ ಸಾಮಾನ್ಯ ಪರಿಸ್ಥಿತಿಗೆ ಬರುತ್ತದೆ. ಜಪಾನದಂತೆ ನಮ್ಮ ದೇಶದಲ್ಲಿ ಏನಾದರು ಸತತವಾಗಿ ವಿಕೋಪಗಳು ಸಂಭವಿಸಿದರೆ ನಮ್ಮ ಕತೆಯೇ ಮುಗಿದು ಹೋಗುತ್ತದೆ.

ಕೊರೊನಾ ರೋಗವು ನಮ್ಮ ಅಭಿವೃದ್ಧಿಯ ನಾಟಕವನ್ನು ನಗ್ನಗೊಳಿಸಿತು. ವಿಕೋಪಗಳ ಪರಿಸ್ಥಿತಿಯಲ್ಲಿ ದೇಶದ ಜನರನ್ನು ರಕ್ಷಿಸುವಂತಹ ಅಭಿವೃದ್ಧಿ ಮಟ್ಟ ಮತ್ತು ಸಾಮರ್ಥ್ಯ ನಮ್ಮದಲ್ಲ ಎಂಬ ಸತ್ಯವನ್ನು ಬಯಲಿಗೆಳೆಯಿತು. ಕೊರೊನಾದಿಂದ ಅಮೆರಿಕಾದಂತಹ ದೇಶಗಳು ತತ್ತಿರಿಸಿರುವಾಗ ನಮ್ಮದೇನು ಪರಿಸ್ಥಿತಿ ಎಂದು ಕೆಲವರು ಪ್ರಶ್ನೆ ಮಾಡಬಹುದು. ಆದರೆ, ಅಮೆರಿಕಾದಲ್ಲಿ ಆಗಿರುವ ಸಾವು–ನೋವುಗಳು ಅಲ್ಲಿನ ಸೌಲಭ್ಯಗಳ ಕೊರತೆಯಿಂದಲ್ಲ. ಈ ಪರಿಸ್ಥಿತಿಗೆ ಅಲ್ಲಿನ ಮುಂದಾಲೋಚನೆ ಇಲ್ಲದ ಅಧ್ಯಕ್ಷನ ನಿರ್ಧಾರಗಳು ಕಾರಣ. ನಮ್ಮಲ್ಲಿ ಮುಂದಾಲೋಚನೆಯ ಕೊರತೆಯೂ ಕಂಡಿತು ಮತ್ತು ಅಭಿವೃದ್ಧಿ ಕುರಿತು ನಮ್ಮ ಸುಳ್ಳುಗಳು ಕೂಡಾ ಬಯಲಿಗೆ ಬಂದವು. ಈಗಲೂ ನಮ್ಮ ದೇಶದಲ್ಲಿ ಅನೇಕರಲ್ಲಿ ರೋಗಗಳನ್ನು ಅರಿಯುವ ಶಿಕ್ಷಣವಿಲ್ಲ. ತುರ್ತಪರಿಸ್ಥಿತಿಯಲ್ಲಿ ಜನರನ್ನು ಸಾಗಿಸುವ ಸಾರಿಗೆ–ಸಂವಹನ ಇಲ್ಲ. ಸರಿಯಾಗಿ ಆಹಾರ ಪೂರೈಕೆ ಮಾಡುವ ವ್ಯವಸ್ಥೆ ಇಲ್ಲ. ರೋಗಿಗಳಿಗೆ ಚಿಕಿತ್ಸೆ ಒದಗಿಸಲು ಸರಿಯಾದ ಪ್ರಮಾಣದಲ್ಲಿ ವೈದ್ಯರು ಮತ್ತು ಆಸ್ಪತ್ರೆಗಳಿಲ್ಲ. ಈ ಕಳೆದ ನಾಲ್ಕೈದು ತಿಂಗಳುಗಳಲ್ಲಿ ಇವುಗಳ ಕೊರತೆಯಿಂದ ಹೆಚ್ಚಿನ ಸಂಖ್ಯೆಯ ಜನರು ಅನೇಕ ಸಮಸ್ಯೆಗಳಿಗೆ ತುತ್ತಾಗಬೇಕಾಯಿತು. ಇದನ್ನೆಲ್ಲಾ ಬಯಲಿಗೆಳೆದ ಮನ್ನಣೆ ಕೊರೊನಾಗೆ ಸಲ್ಲಬೇಕು.

## ರೋಗ ಸಮಯದಲ್ಲಿನ ಪ್ರಜಾಪ್ರಭುತ್ವದ ಅನಾರೋಗ್ಯ

ಕೊರೊನಾದಿಂದ ಆಗುತ್ತಿರುವ ಹಲವು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಬದಲಾಗಿ ಅದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ತಮ್ಮ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ವಿರೋಧಿಸುವ ಕಾರ್ಯಕರ್ತರನ್ನು ಮತ್ತು ಸಂಘ–ಸಂಸ್ಥೆಗಳನ್ನು ಧಮನಿಸುವ ಕೆಲಸ ಈಗಿನ ಆಡಳಿತ ಸರ್ಕಾರವು ಮಾಡುತ್ತಿದೆ. ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿದ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಅವರ ಬಂಧನ ಮಾಡಿದ್ದನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು. ಸುಳ್ಳು

ಪ್ರಕರಣ ದಾಖಲೆಗೆ ಒಳಗಾದವರಲ್ಲಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೂ ಉಂಟು. ಸರ್ಕಾರದ ಜನವಿರೋಧಿ ನೀತಿ ಮತ್ತು ಕಾರ್ಯಕ್ರಮಗಳನ್ನು ವಿರೋಧಿಸುವದು ಮತ್ತು ಅವುಗಳನ್ನು ಪ್ರತಿಭಟಿಸುವದನ್ನು ಧಮನಿಸಿದರೆ ವ್ಯಕ್ತಿಯ ಮಾನವ ಹಕ್ಕುಗಳು ಮತ್ತು ಸಾಂವಿಧಾನಿಕವಾಗಿ ದೊರೆತ ಹಕ್ಕುಗಳನ್ನು ಕಸಿದುಕೊಂಡಂತಾಗುತ್ತದೆ. ಹಕ್ಕುಗಳ ಉಲ್ಲಂಘನೆಯ ಕೆಲಸ ಈ ಕೊರೊನಾ ಸಮಯದಲ್ಲಿ ಅತಿತೀವ್ರದಲ್ಲಿ ನಡೆಯುತ್ತಿದೆ. ಈ ಕೆಲಸದಲ್ಲಿ ಸಂವಿಧಾನಿಕ ಮತ್ತು ಕಾನೂನಾತ್ಮಕ ಸಂಸ್ಥೆಗಳು ಅಪರೋಕ್ಷವಾಗಿ ಕಾರಣವಾಗಿರುವ ವಿಮರ್ಶೆಯನ್ನು ವಿವಿಧ ವೇದಿಕೆಗಳಲ್ಲಿ ನಾವೆಲ್ಲಾ ನೋಡಲಾಗಿದೆ. ಈ ಬೆಳವಣಿಗೆಗಳು ನಮ್ಮ ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವ ಅತಿ ದೊಡ್ಡ ದುರಂತವಾಗಿ ನಮ್ಮ ಪ್ರಜಾಪ್ರಭುತ್ವದ ಅನಾರೋಗ್ಯದ ಗುರುತುಗಳಾಗಿವೆ.

## ರಾಜಕೀಯ ಧುರೀಣತ್ವ

ದೇಶ ಯಾವುದೇ ಕಠಿಣ ಸಮಸ್ಯೆಗಳಿಗೆ ಸಿಲುಕಿದಾಗ ಅದರಿಂದ ಪಾರಾಗುವಂತೆ ಮಾಡುವಲ್ಲಿ ಅಲ್ಲಿನ ಆಡಳಿತ ವ್ಯವಸ್ಥೆಯ ಪಾತ್ರ ಬಹುಮುಖ್ಯ. ಆಡಳಿತ ವರ್ಗದ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಯಾವುದೆ ಸಮಸ್ಯೆಗಳನ್ನು ಬಗೆಹರಿಸಬಹುದು. ಆದರೆ, ಈ ಆಡಳಿತ ವ್ಯವಸ್ಥೆಗೆ ಚುಕ್ಕಾಣಿಯಂತಿರುವ ರಾಜಕೀಯ ಕಾರ್ಯನಿರ್ವಾಹಕರು ದಕ್ಷ ಮತ್ತು ಪ್ರಾಮಾಣಿಕರಾಗಿರದಿದ್ದರೆ ಆಡಳಿತ ವ್ಯವಸ್ಥೆಯಲ್ಲಿರುವ ಶಾಶ್ವತ ಕಾರ್ಯನಿರ್ವಾಹಕ ವರ್ಗದಿಂದ ಯಾವುದೆ ಗುರಿಯನ್ನು ಕಾರ್ಯಗತ ಗೊಳಿಸಲು ಸಾಧ್ಯವಾಗದು. ಸದ್ಯ, ನಮ್ಮ ದೇಶದಲ್ಲಿ ನಡೆಯುತ್ತಿರುವದು ಇದೇ ಆಗಿದೆ. ಒಳ್ಳೆಯ ಆಡಳಿತ ಕೊಡುವ ಬಹಳಷ್ಟು ಜನ ಅಧಿಕಾರಿಗಳು ನಮ್ಮಲ್ಲಿ ಇದ್ದರೂ ಅವರ ಮೇಲಿರುವ ರಾಜಕೀಯ ಕಾರ್ಯನಿರ್ವಾಹಕರು ದಕ್ಷರಲ್ಲ. ಸ್ವತಂತ್ರಗೊಂಡನಂತರ, ದೇಶದ ಆಡಳಿತವು ಮೊದಲ ಬಾರಿಗೆ ಅತಿ ಕಳಪೆ ಮಟ್ಟದ ರಾಜಕೀಯ ಧುರೀಣರ ಕೈಯಲ್ಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಗೃಹ ಮಂತ್ರಿ ಅಮಿತ ಶಾ ಸಮಗ್ರ ಜನಪರ ದೃಷ್ಟಿಕೋನ ಹೊಂದಿರದ ರಾಜಕೀಯ ಧುರೀಣರು. ಕೊರೊನಾ ಸಾಂಕ್ರಾಮಿಕ ರೋಗದಿಂದ ಅನೇಕ ಸಮಸ್ಯೆಗಳಿಗೆ ದೇಶದ ಜನತೆ ತುತ್ತಾಗಿದ್ದರೂ, ಈ ಧುರೀಣರಿಂದ ಯಾವುದೇ ಒಂದು ತೃಪ್ತಿದಾಯಕ ಮಾತು ಮತ್ತು ಕೆಲಸಗಳಾಗಿಲ್ಲ. ಆಡಳಿತ ಪಕ್ಷದ ಶಾಸಕರನ್ನು ತಮ್ಮ ಕಡೆ ಒಲಿಸಿ ಸರ್ಕಾರವನ್ನು ಬಿಳಿಸಿ ತಮ್ಮ ಪಕ್ಷದ ಸರ್ಕಾರವನ್ನು ರಚಿಸುವ ಭಾರತೀಯ ಜನತಾ ಪಕ್ಷದ ಧುರೀಣರ ಹಂಬಲ ಮತ್ತು ಬಿಹಾರದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಗೆ ಇವರು ಮಾಡುವ ಸಿದ್ಧತೆಯನ್ನು ನೋಡಿದರೆ ಈಗಿನ ಆಡಳಿತ ಪಕ್ಷದ ಧುರೀಣರಿಗೆ ಕೊರೊನಾದಿಂದ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತೆ ಇಲ್ಲ ಅನಿಸುತ್ತದೆ. ತಮ್ಮ ಭಕ್ತ ಸಮುದಾಯವನ್ನು ನಂಬಿಸಲು ನರೇಂದ್ರ ಮೋದಿಯು ಈ ಸಂದಿಗ್ಧ ಸಮಯದಲ್ಲಿ ತರ ತರಹದ ಸುಳ್ಳುಗಳನ್ನು ಹೇಳಬೇಕಾಯಿತು. ಈ ಸುಳ್ಳುಗಳನ್ನು ಭಕ್ತಲೋಕ ನಂಬಿರಬಹುದು. ಆದರೆ, ದೇಶದ ಪ್ರಜ್ಞಾವಂತ ನಾಗರಿಕರು ನಂಬಿಲ್ಲ. ಕಳೆದ ಕೆಲವು ತಿಂಗಳುಗಳ ಬೆಳವಣಿಗೆಗಳು ನರೇಂದ್ರ ಮೋದಿ ಮತ್ತು ಅಮಿತ ಶಾ ಅವರ ರಾಜಕೀಯ ಧುರೀಣತ್ವದ ಮಟ್ಟವನ್ನು ಬಯಲಿಗೆಳೆದವು ಮತ್ತು ಇವರಿರ್ವರು ಅಸಮರ್ಥ ರಾಜಕೀಯ ಧುರೀಣರೆಂದು ಸಾಬೀತು ಮಾಡಿದವು.

ತಟ್ಟೆ ಬಡಿಯುವ, ಘಂಟೆ ಭಾರಿಸುವ ಮತ್ತು ದೀಪ ಬೆಳಗಿಸುವ ನಾಟಕಗಳನ್ನೆಲ್ಲಾ ಮುಗಿಸಿ ಪರಿಸ್ಥಿತಿ ಕೈಮೀರಿದಾಗ ನಮ್ಮ ಪ್ರಧಾನ ಮಂತ್ರಿ ಆತ್ಮನಿರ್ಭರದ ಮಾತಗಳನ್ನು ಆಡಲು ಪ್ರಾರಂಭಿಸಿದರು. ಅವರ ಮಾತುಗಳನ್ನು ಇನ್ನೊಂದು ರೀತಿಯಲ್ಲೂ ಗ್ರಹಿಸಬಹುದು. ನಮ್ಮಿಂದ ಸಹಾಯ ಮಾಡುವ ಹೊಣೆಗಾರಿಕೆಯನ್ನು ನಿರೀಕ್ಷಿಸಬೇಡಿ, ನಿಮ್ಮನ್ನು ನೀವೆ ರಕ್ಷಿಸಿಕೊಳ್ಳಿ ಎಂದು ಹೇಳುವ ಮಾತುಗಳು ಹೊಣೆಗಾರಿಕೆಯಿಂದ ಪಲಾಯನ ಮಾಡುವ ಮಾತುಗಳು ಕೂಡಾ ಆಗಿರಬಹುದು. ಕಳೆದ ನಾಲ್ಕು ತಿಂಗಳಗಳಲ್ಲಿ ಕೇಂದ್ರ ಸರ್ಕಾರವು ಕೊರೊನಾ ತಡೆಯುವ ಕಾರ್ಯಕ್ಕೆ ತೋರಿರುವ ಪ್ರತಿಕ್ರೀಯೆಯನ್ನು ನೋಡಿದರೆ ಈ ಮೇಲೆ ತಿಳಿಸಿರುವ ಗ್ರಹಿಕೆ ಸರಿ ಅಂತ ಕಾಣುತ್ತದೆ.

## ವಿಶ್ವಗುರು ಸ್ಥಾನದ ಹುಚ್ಚು ಭ್ರಮೆ

ಭಾರತವನ್ನು ವಿಶ್ವಗುರುವನ್ನಾಗಿ ಬದಲಾಯಿಸುವ ಭಾರತೀಯ ಜನತಾ ಪಕ್ಷದ ನಾಯಕರುಗಳು ಮಾತನಾಡುವ ಗುರಿ ಯಾವ ಅಭಿವೃದ್ಧಿ ಪುರಾವೆಗಳ ಮೇಲೆ ಮಾಡಲಾಗುತ್ತಿದೆ ಎಂದು ತಿಳಿಯಲಾರದು. ವಾಸ್ತವ ಪರಿಸ್ಥಿತಿಯನ್ನು ನೋಡಿದಾಗ ಇದೊಂದು ಹುಚ್ಚು ಭ್ರಮೆ ಎಂದು ಕಾಣುತ್ತದೆ. ನಮ್ಮ ದೇಶದ ಪರಿಸ್ಥಿತಿ ನಮಗೆ ಗೊತ್ತಿದ್ದರೂ ನಮ್ಮ ನಾಯಕರುಗಳು ಅಧಿಕಾರ ದಾಹಕ್ಕಾಗಿ ಮತ್ತು ತಮ್ಮ ರಹಸ್ಯ ಕಾರ್ಯಸೂಚಿಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಜನರನ್ನು ಮರುಳುಗೊಳಿಸಲು ವಿಶ್ವಗುರು ಸ್ಥಾನದ ಬಗ್ಗೆ ಮಾತನಾಡುವದು ಅವರ ಭಂಡತನಯೆನ್ನಬೇಕೊ ಅಥವಾ ಅವರ ಮಾತುಗಳನ್ನು ನಂಬುವ ನಮ್ಮಲ್ಲಿರುವ ಬಹಳಷ್ಟು ಜನ ಕುರುಡ ಭಕ್ತರಾಗಿದ್ದಾರೋ ಎಂದು ಗೊತ್ತಾಗದ ಪರಿಸ್ಥಿತಿ ನಮಗೆ ಬಂದಿದೆ. ಅದೇನಿದ್ದರೂ, ಭಾರತೀಯ ಜನತಾ ಪಕ್ಷದ ನಾಯಕರ ಸುಳ್ಳುಗಳನ್ನು ನಂಬುವ ಭಕ್ತರಾದ ನಮ್ಮ ಸೋದರರಲ್ಲಿ ಅರಿವು ಮೂಡಿಸುವ ಕೆಲಸ ಪ್ರಜ್ಞಾವಂತ ಪಕ್ಷ ಮತ್ತು ನಾಯಕರುಗಳಿಂದ ಇನ್ನೂ ಹೆಚ್ಚಿನ ಮಟ್ಟದಲ್ಲಿ ಆಗಬೇಕಾಗಿದೆ. ಈ ವಿಷಯದಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಕ ವರ್ಗವು ಹೊಣೆಗಾರಿಕೆಯ ಕೆಲಸ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಜಾಗತೀಕ ಚಿಂತಕರಾದ ಕಾರ್ಲ ಮಾರ್ಕ್ಸ ಅಲ್ಲದೆ ನಮ್ಮದೇ ಚಿಂತಕರಾದ ಬುದ್ಧ, ಬಸವ, ಕಬೀರ, ಗುರುನಾನಕ, ನಾರಾಯಣ ಗುರು, ರಮಾಬಾಯಿ, ಫುಲೆ ಮತ್ತು ಅಂಬೇಡ್ಕರ ಅವರ ಚಿಂತನೆಗಳು ಸಹಾಯವಾಗಬಹುದು.

## ಅನೌಷ್ಟಿಕತೆ

ಹಿಟ್ಟಿಲ್ಲ
ಹೊಟ್ಟೆಗೆ

ಮಂದಿರ
ಅಡಿಗಲ್ಲಿಗೆ
ಬೆಳ್ಳಿ ಇಟ್ಟಿಗೆ !

✍... ಸುರೇಶ ಅಂಗಡಿ